ಇ) ಹಾಗೆ ವರ್ಗಾಯಿಸುವಾಗ ಸಂಖ್ಯೆ ಡಿಪಿಎಆರ್ ೯ ಎಸ್‌ಟಿಆರ್ ೮೪-೯-೮೫ನೇ ಆದೇಶದಲ್ಲಿರುವ ಸೂಚನೆಗಳನ್ನು ಸಂಪೂರ್ಣ ಪಲಿಸಲಾಗಿದೆಯೆ ?

ಈ) ರಾಜ್ಯದ ಶಾಸಕರುಗಳ ವಿನಂತಿ ಪ್ರಕಾರ ಎಷ್ಟು ವಲಯ ಅರಣ್ಯ ಅಧಿಕಾರಿಗಳನ್ನು ವರ್ಗಾಯಿಸಲಾಗಿದೆ, ಹಾಗೂ ಎಷ್ಟು ಜನರನ್ನು ವರ್ಗಾಯಿಸದೇ ಇಡಲಾಗಿದೆ ?

ಉ) ಭಟ್ಕಳ ಹೊನ್ನಾವರ ತಾಲ್ಲೂಕುಗಳಲ್ಲಿ ಮೇಲೆ ಹೇಳಿದ ಸರಕಾರಿ ಆದೇಶದಲ್ಲಿ ತೋರಿಸಿದ ಕನಿಷ್ಟ ಅವಧಿಗಿಂತಲೂ ಹೆಚ್ಚಿಗೆ ಸೇವೆ ಸಲ್ಲಿಸಿದ ಹಾಗೂ ಕನಿಷ್ಟ ಅವಧಿಗಿಂತಲೂ ಸೇವೆ ಸಲ್ಲಿಸದಿರುವ ಎಷ್ಟು ಅಧಿಕಾರಿಗಳು ಸೇವೆಯಲ್ಲಿದ್ದಾರೆ, ಅವರನ್ನು ವರ್ಗಾಯಿಸದಿರಲು ಕಾರಣಗಳೇನು ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ೧೭೫ ವಲಯ ಅರಣ್ಯ ಅಧಿಕಾರಿಗಳನ್ನು ವರ್ಗಾಯಿಸಲಾಗಿದೆ. ಇವರಲ್ಲಿ ೧೦೫ ಜನರಿಗೆ ಅವಧಿ ಪೂರ್ವ ವರ್ಗಾವಣೆ ಆಗಿದೆ.

ಆ) ಸರ್ಕಾರಿ ಆದೇಶದ ಸಂಖ್ಯೆ ಡಿಪಿಎಆರ್ ೯ ಎಸ್‌ಟಿಆರ್ ೮೪ ಮೇರೆಗೆ ಇಷ್ಟು ಕಡಿಮೆ ಸೇವೆ ಸಲ್ಲಿಸಿದ ೧೦೫ ಸದರಿ ಅಧಿಕಾರಿಗಳನ್ನು ವರ್ಗಾಯಿಸಲಾಗಿದೆ.

ಇ) ಹಾಗೆ ವರ್ಗಾಯಿಸುವಾಗ ಆಡಳಿತ ಸುಧಾರಣಾ ಇಲಾಖೆಯ ಮಾರ್ಗದರ್ಶನ ಪರಿಗಣಿಸಿ ಮಾಡಲಾಗಿರುತ್ತದೆ.

ಈ) ವರ್ಗಾವಣೆಗಳನ್ನು ಸರ್ಕಾರದ ಆಡಳಿತ ದೃಷ್ಟಿಯಿಂದ ಮಾಡಲಾಗಿರುವುದರಿಂದ ಪ್ರಶ್ನೆಯು ಉದ್ಭವಿಸುವುದಿಲ್ಲ.

ಉ) ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕುಗಳಲ್ಲಿ ಕನಿಷ್ಟ ಅವಧಿಗಿಂತಲೂ ಹೆಚ್ಚಿಗೆ ಸೇವೆ ಸಲ್ಲಿಸಿದವರ ಸಂಖ್ಯೆ ೨. ಕನಿಷ್ಟ ಅವಧಿಗಿಂತಲೂ ಹೆಚ್ಚಿಗೆ ಸೇವೆ ಸಲ್ಲಿಸದಿರುವವರ ಸಂಖ್ಯೆ ೪. ಹೆಚ್ಚು ವರ್ಷ ಸೇವೆ ಸಲ್ಲಿಸಿದರೂ ಅವರ ಸೇವೆಯು ಇಲಾಖೆಗೆ ಆಡಳಿತ ದೃಷ್ಟಿಯಿಂದ ಅವರನ್ನು ಅಲ್ಲಿಯೇ ಮುಂದುವರಿಸಲಾಗಿದೆ.

ಕಾಫಿ ತೋಟದ ಬಗ್ಗೆ

೭೩ (೧೫೩) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಅರಣ್ಯದ ಭೂಮಿಯನ್ನು ಕಾಫಿ ತೋಟದ ಮಾಲೀಕರಿಗೆ ಮಂಜೂರು ಮಾಡುವ ಬಗ್ಗೆ ಸರ್ಕಾರದವರು ಯಾವ ಯಾವ ಜಿಲ್ಲೆಯಲ್ಲಿ ಕ್ರಮ ಕೈಗೊಂಡಿದ್ದಾರೆ ?

ಆ) ಹಾಗಿದ್ದಲ್ಲಿ ಇದನ್ನು ರಾಜ್ಯದ ಯಾವ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗಿದೆ ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ರಾಜ್ಯದ ಯಾವ ಜಿಲ್ಲೆಗಳಲ್ಲಿಯೂ ಅರಣ್ಯದ ಭೂಮಿಯನ್ನು ಕಾಫಿ ತೋಟದ ಮಾಲೀಕರಿಗೆ ಮಂಜೂರು ಮಾಡುವ ಬಗ್ಗೆ ಸರ್ಕಾರದವರು ಈವರೆಗೆ ಯಾವ ಕ್ರಮವನ್ನು ತೆಗೆದು ಕೊಂಡಿರುವುದಿಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೋಲಾರ ಜಿಲ್ಲೆಯಲ್ಲಿ ಉದ್ದಿಮೆಗಳ ಸ್ಥಾಪನೆ ಬಗ್ಗೆ

೭೬ (೫೭೫) ಶ್ರೀ ಪಿ. ಬೈರೇಗೌಡ (ವೇಮಗಲ್).—ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸದಾ ಬರಗಾಲ ಮತ್ತು ನಿರುದ್ಯೋಗ ಪೀಡಿತ ಜಿಲ್ಲೆಯಾದ ಕೋಲಾರ ಜಿಲ್ಲೆಯಲ್ಲಿ ಖಾಸಗಿ, ಸರ್ಕಾರಿ ಮತ್ತು ಜಂಟಿ ವಲಯಗಳಲ್ಲಿ ಉದ್ದಿಮೆಗಳನ್ನು ಸ್ಥಾಪಿಸಬೇಕೆಂಬ ಬೇಡಿಕೆ ಸಾರ್ವಜನಿಕರಿಂದ ಬಂದಿರುವುದು ನಿಜವೇ ?